ಸಾರಾಯಿ ಅಂಗಡಿ ರದ್ದು ಗೊಳಿಸುವುದು.

1364-ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರ ಜಯನಗರ ಒಂದನೇ ಬ್ಲಾಕ್ ಪೂರ್ವ ಬೈರಸಂದ್ರ, 3ನೇ ಮುಖ್ಯ ರಸ್ತೆಯಲ್ಲಿ ಸಾರಾಯಿ ಅಂಗಡಿ ಇರುವುದರಿಂದ ಸುತ್ತಮುತ್ತಲಿನ ಜನರಿಗೆ ತೊಂದರೆಯಾಗಿದೆ ಎಂದು ಪ್ರತಿಭಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಸಾರಾಯಿ ಅಂಗಡಿ ಹರಿಜನ ಕಾಲೋನಿಯಲ್ಲಿರುವುದು. ಪಕ್ಕದಲ್ಲಿಯೇ ದೇವಸ್ಥಾನ ಹಾಗೂ ಆಸ್ಪತ್ರೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಇ) *ಬೈರಸಂದ್ರದ ಈ ಸ್ಥಳದಲ್ಲಿ ಅಂಗಡಿಯನ್ನು ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಸಂಬಂಧಪಟ್ಟ ಅಧಿಕಾರಿಗಳು ಸದರಿ ಸಾರಾಯಿ ಅಂಗಡಿಯನ್ನು ಸ್ಥಳಾಂತರಿಸಲು ಅಥವಾ ಲೈಸನ್ಸ್ ರದ್ದುಗೊಳಿಸಲು ಕ್ರಮ ಕೈಗೊಳ್ಳದಿರಲು ಕಾರಣವೇನು?*

ಉ) *ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಗಮನಿಸಿ ಸಾರಾಯಿ ಅಂಗಡಿಯ ಲೈಸನಸ್ಸು ಕೂಡಲೇ ಸರ್ಕಾರದವರು ರದ್ದುಗೊಳಿಸಲು ಕ್ರಮ ತೆಗೆದುಕೊಳ್ಳುವರೆ?*

ಊ) *ಹಾಗಿದ್ದಲ್ಲಿ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು?*

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು)

ಅ) ಹೌದು.

ಆ) ಹೌದು

ಇ) ಹೌದು.

ಈ) ಈಗಿರುವ ಹಾಲಿ ಸ್ಥಳದಿಂದ ಸಾರಾಯಿ ಅಂಗಡಿಯನ್ನು ಸ್ಥಳಾಂತರಿಸಬೇಕೆಂದು ನೋಟೀಸನ್ನು ಅಬಕಾರಿ ಸಾರಾಯಿ ಗುತ್ತಿಗೆದಾರರಿಗೆ ದಿನಾಂಕ 29-10-90 ರಂದು ನೀಡಲಾಗಿದೆ.

ಉ) ಅಬಕಾರಿ ಅಧೀಕ್ಷಕರ ಕಛೇರಿಯಿಂದ ಸದರಿ ಸಾರಾಯಿ ಅಂಗಡಿಯನ್ನು ಸ್ಥಳಾಂತರಿಸಲು ಈಗಾಗಲೇ ಮೇಲೆ ಹೇಳಿದಂತೆ ದಿನಾಂಕ 29-10-90ರಲ್ಲಿ ಆದೇಶಿಸಲಾಗಿದೆ. ಆದೇಶದ ವಿರುದ್ಧ ಸಾರಾಯಿ ಗುತ್ತಿಗೆದಾರರು ಅಬಕಾರಿ ಆಯುಕ್ತರ ಮುಂದೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಫೀಲು ಮನವಿಯು ಕಛೇರಿಯ ಮುಂದೆ ಇರುತ್ತದೆ.

ಊ) ತೀರ್ಮಾನದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು.

ಸಾರಾಯಿ ಹರಾಜುಗಳು.

1371 – ಶ್ರೀ ಆರ್.ಎಲ್.ಜಾಲಪ್ಪ (ದೊಡ್ಡಬಳ್ಳಾಪುರ), ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ 1990-91ರಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಸಾರಾಯಿಯ ಗುತ್ತಿಗೆ ಮರು ಹರಾಜಾಗಿದೆ?*

ಆ) *1990-91 ರಲ್ಲಿ ಸಾರಾಯಿಯ ಮರು ಹರಾಜಿಗೆ ಬಂದಾಗ ಕೋರ್ಟ್‌ಗಳಿಂದ ತಡೆ ಆಜ್ಞೆ ಬಂದಿದೆಯೆ?*

ಇ) *1990-91ರಲ್ಲಿ ಸಾರಾಯಿಯ ಗುತ್ತಿಗೆದಾರರಿಂದ ಸರ್ಕಾರಕ್ಕೆ 1991 ರ ಜನವರಿ ಅಖೈರಿಗೆ ಬರಬೇಕಾದ ಬಾಕಿ ಎಷ್ಟು?*

ಶ್ರೀ ಕೆ.ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು)

ಅ) 28-2-91ರವರೆಗೆ ಹನ್ನರಡು ತಾಲ್ಲೂಕುಗಳಲ್ಲಿ ಮರು ಹರಾಜನ್ನು ನಡೆಸಲಾಗಿದೆ.

ಆ) ಹೌದು.

ಇ) 21.65ಕೋಟಿ ರೂ.ಗಳು.

ನಾಯಕನ ಹಟ್ಟಿಯಲ್ಲಿ ಪೋಲೀಸ್ ಸ್ಟೇಷನ್ ತೆರೆಯುವ ಬಗ್ಗೆ.

1373 - ಶ್ರೀ ಎನ್.ಜಿ.ನಾಯಕ್ (ಮೊಲಕಾಲ್ಮುರು), ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯಲ್ಲಿ ಪೋಲೀಸ್ ಸ್ಟೇಷನ್ ತೆರೆಯಬೇಕೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಪೋಲೀಸ್ ಸ್ಟೇಷನ್ನು ತೆರೆಯಲಾಗುವುದು?

ಧರ್ಮಸಿಂಗ್ (ಗೃಹ ಸಚಿವರು) :

ಅ) ಸಧ್ಯಕ್ಕೆ ಯಾವ ಪ್ರಸ್ತಾವನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

Establishment of court at belur.

1339 - Shri B.H.Lakshmanaiah (Belur), will the hon'ble minister for law and social welfare be pleascd to state.

a) Is there any proposal before the government for establishment of court at belur?

b) If so, why it is not started so far?

c) How many cases relating to Belur Taluk are pending in the courts of Hassan and Shakleshpur?

Sri.B.Shivanna (Minister for law and social welfare)

a) Yes

b) Due to financial constaints and nonavailability of suitable building.

c) Information is not readily available. Information will be obtained and furnished.

ಪೋಲೀಸ್ ಠಾಣೆಯ ಬಗ್ಗೆ.

1342 – ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ, (ಬೇಲೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ಪಟ್ಟಣವು ದಿನೇ ದಿನೇ ಬೆಳೆಯುತ್ತಿದ್ದು ಮತ್ತು ಅಂತರರಾಷ್ಟ್ರೀಯ ಪ್ರವಾಸೋದ್ಯಮ ಆಕರ್ಷಿತ ಪಟ್ಟಣವಾಗಿರುವುದರಿಂದ ಪಟ್ಟಣ ಪ್ರದೇಶಕ್ಕೆ ಒಂದು ಪೋಲೀಸ್ ಸ್ಟೇಷನ್ ಮತ್ತು ಮೂರು ಹೋಬಳಿಗಳು ಸೇರಿರುವ ಬೇಲೂರು ಪೋಲೀಸ್ ಸ್ಟೇಷನ್ ಭಾಗ ಮಾಡಿ ಗ್ರಾಮಾಂತರ ಪೋಲೀಸ್ ಠಾಣೆಯೊಂದನ್ನು ಮಾಡಬೇಕೆಂದು ಕೋರಿಕೆ ಸರ್ಕಾರಕ್ಕೆ ಬಂದಿಲ್ಲವೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಕೊಂಡಿರುವ ಕ್ರಮವೇನು?